doc-377 Tip-2

Reg B G No.155 ಶ್ರೀ 23-9-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI Daily, MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕನ್ನಡ ಪ್ರದೇಶಗಳಲ್ಲಿ ಸಹಿ ಸಂಗ್ರಹಣೆ

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು. ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಯೂತ್ ರ್‍ಯಾಲಿ

ಬೆಂಗಳೂರು— ದಸರಾ ಮಹೋತ್ಸವ ಸಂಬಂಧವಾಗಿ ವಿದ್ಯಾಭ್ಯಾಸ ಇಲಾಖೆಯು ಕಳೆತುಂಬಿದ ಯೂತ್ ರ್‍ಯಾಲಿಯನ್ನು ಶನಿವಾರ ಏರ್ಪಡಿಸಿತ್ತು — ನಗರದ 100 ಮಾಧ್ಯಮ ಮತ್ತು ಪ್ರೌಢ ಶಾಲೆಗಳ 4 ವಿರ ಹುಡುಗ ಹುಡುಗಿಯರು ಸೇರಿದ್ದರು.

ರುಜು ಚಳವಳ

ಬೆಂಗಳೂರು— ಮಡಕಾಸಿರ ವಿಮೋಚನಾ ಸಮಿತಿಯ ಸ್ವಯಂಸೇವಕರ ಒಂದು ತಂಡವು ಮಡಕಾಸಿರ ತಾಲ್ಲೋಕಿನ 65 ಗ್ರಾಮಗಳಲ್ಲಿ ಪ್ರವಾಸ ಮಾಡಿ, ಆ ತಾಲ್ಲೋಕು ಮೈಸೂರು ರಾಜ್ಯಕ್ಕೆ ಸೇರ್ಪಡೆಯಾಗಬೇಕೆಂದು, ಅಲ್ಲಿಯ 1.5 ಲಕ್ಷ ಕನ್ನಡಿಗರ ರುಜು ಶೇಖರಣೆ ಮಾಡುವರು.

ದೈವಭಕ್ತ ಹುಲಿ

ಗೌಹತಿ— 40 ವರ್ಷದ ಒಂದು ಹುಲಿಯು ಪಾತ್ರಿಹೊತ್ತಿನಲ್ಲಿ ಗಾರೋ ಬೆಟ್ಟಗಳ ಗಡಿಯಲ್ಲಿನ ಒಂದು ಚಿಕ್ಕ ದೇವಸ್ಥಾನಕ್ಕೆ ಭೇಟಿ ಕೊಟ್ಟು, ಸ್ವಲ್ಪ ಹೊತ್ತು ಅಲ್ಲಿ ಕೂತಿದ್ದು ನಂತರ ಕಾಡಿಗೆ ಹೋಗುತ್ತಿದೆ.

ಅಗರಲ್ಲೇ ಭೀಕರ ಹೊಡೆದಾಟ

ಹಾಂಕಾಂಗ್— ಕಮ್ಯೂನಿಸು ಚೀಣದ ಕ್ವಾಂಗಸಿ ಪ್ರಾಂತ್ಯದಲ್ಲಿ 5 ತಿಂಗಳಿಂದ ಗುಂಪುಗಳಲ್ಲಿನ ಹೊಡೆದಾಟದಲ್ಲಿ 50 ಸಾವಿರ ಮಂದಿ ಸತ್ತಿರುವರೆಂದು ಒಂದು ರೆಡ್‌ಗಾರ್ಡ್ ಮ್ಯಾಗಜೈನ್ ಪ್ರಕಟಿಸಿದೆ.

★

ಪದ್ಮಭಖಷಣ ಡಾ || ಎಂ. ಸಿ. ಮೋದಿ

ಬೆಂಗಳೂರಿನಲ್ಲಿ ಸೆಪ್ಟಂಬರು ತಿಂಗಳಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ಪದ್ಮಭೂಷಣ ಡಾ|| ಎಂ. ಸಿ. ಮೋದಿಯವರು 350 ವಿವಿಧ ನೇತ್ರ ಚಿಕಿತ್ಸೆ ನಡೆಸಿದರು — ನಗರ ಮತ್ತು ಜಿಲ್ಲಾ ಪ್ರವಾಸದಲ್ಲಿ ಒಟ್ಟು ನೇತ್ರ ಪರೀಕ್ಷೆಗಳು 15340 ; ಉಚಿತ ಔಷಧಿ ಕೊಟ್ಟದ್ದು 1351 ; ಉಚಿತ ಭೋಜನ ಒದಗಿಸಿದ್ದು 8286.

★

ವಿಪರೀತ ಕೊಬ್ಬಿದ್ದಕ್ಕೆ ಕೆಲಸ ಕಳೆದುಕೊಂಡ

ಲಾಸ್ ಏಂಜಲ್ಸಿನ ಲಾಯರ್ ಡಾನ್ ಜೋನ್ಸ್ 255 ಪೌಂಡು ತೂಕ, 15 ಅಡಿ 5 ಅಂಗುಲ ಎತ್ತರವಿದ್ದು, 41 ವರ್ಷದವ ಅವನನ ಕ್ಯಾಲಿಫೋರ್ನಿಯಾದ ವೆಂಟಾರಾ ಕೌಂಟಿ ಡೆಪ್ಟಿ ಪಬ್ಲಿಕ್ ಡಿಫೆಂಡರ್ ಕೆಲಸಕ್ಕೆ ನೇಮಿಸಲಾಗಿತ್ತು. ಅವನು ಅತೀ ದಪ್ಪವಾಗಿರುವನೆಂದು ಕೆಲಸದಿಂದ ವಜಾ ಮಾಡಲ್ಪಟ್ಟನು. ತನ್ನ ಬೆಳವಣಿಗೆಗೆ ತನ್ನ ಹೆಂಡತಿ ಮಾಡುವ ರಚಿಕರ ಆಹಾರವೂ ಮತ್ತು ತನಗೆ ಒಳ್ಳೇ ಹಶುವಿರುವದೂ ಕಾರಣವೆಂದಿರುವುದೂ ಕಾರಣವೆಂದಿರುವನು ಈ ಅತಿ ಕೊಬ್ಬಿದ ಮನುಷ್ಯ.

ಬರ್ಮಾಕ್ಕೆ ಸಾಲಾ

ನವದೆಹಲಿ— ಭಾರತವು ಬರ್ಮಾಕ್ಕೆ ಸಾಲಾ ಕೊಡುವ ಬಗ್ಗೆ ಎರಡು ಸರಕಾರದ ನಿಯೋಗಗಳು ಮಾತುಕತೆ ನಡೆಸುತ್ತಿವೆ.

★

ವಸ್ತುಪ್ರದರ್ಶನ

ಮೈಸೂರು—ದಸರಾ ವಸ್ತುಪ್ರದರ್ಶನಕ್ಕೆ ಲಲಿತಕಲಾ ಮತ್ತು ಕುಶಲವಿದ್ಯೆಗಳ ಪ್ರವೇಶಗಳು 900 ಕ್ಕೂ ಹೆಚ್ಚು ಬಂದಿದ್ದು, 433 ಆರಿಸಲ್ಪಟ್ಟವು.

★

ಮುಷ್ಕರದ ಖಂಡನೆ

ಕೋಲಾರ ಚಿನ್ನದ ಗಣಿ— ಚಿನ್ನದ ಗಣಿ ಕೆಲಸಗಾರರ ಭಾರಿ ಸಭೆಯಲ್ಲಿ ಶನಿವಾರ ಎಂ ಪಿ ಸಿ ಸಿ ಅಧ್ಯಕ್ಷರು ಡಾ || ನಾಗಪ್ಪ ಆಳ್ವಾರವರು ಮಾತನಾಡುತ್ತಾ, ಕೇಂದ್ರ ಸರ್ಕಾರಿ ನೌಕರರ ಮುಷ್ಕರವನ್ನು ದೂಷಿಸಿದರು.

ದಸರಾ

ಮೈಸೂರು— ಇಂದು ಮೈಸೂರಿನಲ್ಲಿ ವೈಭವ ದಸರಾ ಪ್ರಾರಂಭವಾಯಿತು — ಶ್ರೀಮನ್ಮಹಾರಾಜರವರು ಬೆಳಿಗ್ಗೆ 10.33 ಸಿಂಹಾಸನಾರೋಹಣ ಮಾಡಿ ಸಾಂಪ್ರಹಾಯಕ ದರ್ಬಾರ್ ನಡೆಸಿದರು ; ಅಕ್ಟೋಬರ್ 1 ರವರೆಗೆ ದಿನಾ ಸಂಜೆ 7 ಕ್ಕೆ ರಾಜಸಭೆ ನಡೆಯುವುದು — ತಾ || 30 ರಂದು ಬೆಳಿಗ್ಗೆ 10.30 ಕ್ಕೆ ಶ್ರೀಮನ್ಮಹಾರಾಜರು ಆಯುಧಪೂಜೆ ನೆರವೇರಿಸುವರು — ಅಕ್ಟೋಬರ್ 1 ರಂದು ಸಂಜೆ 5.35 ಕ್ಕೆ ವೈಭವ ಜಂಬೂ ಸವಾರಿ ಅರಮನೆಯಿಂದ ಬನ್ನೀಮಂಟಪಕ್ಕೆ ಹೊರಡುವದು — ದಸರಾ ಮೆರವಣಿಗೆಯ 3 ಮೈಲಿ ಉದ್ದಕ್ಕೂ ವಿವಿಧ ಬಣ್ಣಗಳ ವಿದ್ಯುದ್ದೀಪಗಳಿಂದ ಅಲಂಕರಿಸಲಾಗುತ್ತಿದೆ — ದಸರಾ ಕಾಲದಲ್ಲಿ ಸಂಜೆ ಟೌನ್‌ಹಾಲ್‌ನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಏರ್ಪಾಟಿದೆ — ಒಂದ ತಿಂಗಳು ವಸ್ತುಪ್ರದರ್ಶನ ನಡೆಯುತ್ತದೆ.

★

ಜಾಮೀನಿನ ಮೇಲೆ ಬಿಡುಗಡೆ

ನವದೆಹಲಿ— ಗುರುವಾರದ ಸಾಂಕೇತಿಕ ಮುಷ್ಕರ ಸಂಬಂಧದಲ್ಲಿ ಡಸ್ತಗಿರಿ ಮಾಡಲ್ಪಟ್ಟ 2400 ಕೇಂದ್ರ ಸರ್ಕಾರಿ ನೌಕರರು ಜಾಮೀನಿನ ಮೇಲೆ ಬಿಡಲ್ಪಟ್ಟರು — ಜಾಮೀನು ಅರ್ಜಿಗಳ ಪರಿಶೀಲನೆಗೆ 12 ಮಂದಿ ಮ್ಯಾಜಿಸ್ಟ್ರೇಟರೂ ಓರ್ವ ಜಿಲ್ಲಾ ಮ್ಯಾಜಿಸ್ಟ್ರೇಟರೂ ನೇಮಿಸಲ್ಪಟ್ಟಿದ್ದರು.

★

ಅನಾವೃಷ್ಟಿ ಪರಿಹಾರ

ಹೈದರಬಾದು — ಆಂಧ್ರ ಸರಕಾರವು ಅನಾವೃಷ್ಟಿ ಪರಿಹಾರಕ್ಕೆ ರೂ. 15 ಕೋಟಿ ಮಂಜೂರ್ಮಾಡಿದೆ.

★

ಬೊಂಬಾಯಿ— ಪ್ರಯಾಣೀಕರಿದ್ದ ಒಂದು ಟ್ರಕ್ ಕಂಕಾಲಿ ಹತ್ತಿರ ಒಂದು ನದಿಗೆ ಬಿದ್ದು 51 ಮಂದಿ ಸತ್ತು 56 ಮಂದಿ ಗಾಯಗೊಂಡರು.

ಹಿಂದೂಗಳ ಆಚಾರ

ಸಂಗ್ರಾಹಕರು– 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಪ್ರಾತಃಕಾಲದಲ್ಲೆದ್ದು, ಪಾಪಿಷ್ಟನನ್ನೂ, ದುರ್ಭಾಗ್ಯನನ್ನೂ, ಮದ್ಯವನ್ನೂ, ನಿಂದಕನನ್ನೂ, ದುರ್ಲಕ್ಷಣವುಳ್ಳವನನ್ನೂ ಯಾವನು ನೋಡುವನೋ ಆ ವನು ಆ ದಿನದಲ್ಲಿ ದುಃಖಭಾಗಿಯಾಗುವನು.

ಅಗ್ನಿ, ಸೂರ್ಯ, ಚಂದ್ರ, ಬ್ರಾಹ್ಮಣ, ಗೋವು, ಸಂಧ್ಯೆಗಳಿಗೆದುರಾಗಿ ಮಲ ಮೂತ್ರ ವಿಸರ್ಜನೆ ಮಾಡುವವನ ಪ್ರಜ್ಞೆಯು ನಷ್ಟವಾಗುವುದು. ಪಾದರಕ್ಷೆಯನ್ನು ಧರಿಸಿ ಮಲಮೂತ್ರ ವಿಸರ್ಜನೆಮಾಡಬಾರದು. ದ್ವಿಜರಿಗೆ ಶೌಚವು ಮುಖ್ಯವಾದ ದ್ದು; ಸರ್ವಪ್ರಯತ್ನದಿಂದಲೂ ಅವಶ್ಯಕವಾಗಿ ಮಾಡತಕ್ಕದ್ದು. ಶೌಚಾಚಾರ ಹೀನನಾದವನಿಂದ ಮಾಡಲ್ಪಡುವ ವಿಶಿಷ್ಟಕರ್ಮಗಳು ನಿಷ್ಫಲವಾಗುವದು.

ಭರದ್ವಾಜಃ ॥ ಯಾವಂತೋನಿಯಮಾಃಪ್ರೋಕ್ತಾಃ । ದ್ವಿಜಕ್ರೀಷ್ಮಸ್ಯಭುಂಜತಃ । ಪ್ರೇಕ್ಷ್ಯಪ್ರೇಕ್ಷ್ಯೇಷು ಕರ್ತವ್ಯಾ । ದಂತಧಾವನ ಕರ್ಮಣಿ । ಮುಖಶುದ್ಧಿಂ ಪ್ರಯತ್ನೇನ । ಕೃತ್ವೈವಾಹರಹದ್ವಿಜಃ । ಪ್ರಾತಸ್ಸಂಧ್ಯಾಮುಪಾಸೀತ ।ತಾಂವಿನಾನಶುಚಿರ್ಭವೇತ್ ॥

ಭೋಜನವೇ ಮುಂತಾದ ವಿಷಯದಲ್ಲಿ ಎಷ್ಟು ನಿಯಮಗಳು ಹೇಳಲ್ಪಟ್ಟಿರುವವೋ, ದಂತಧಾವನದಲ್ಲಿಯೂ ಅಷ್ಟುಮಟ್ಟಿನ ನಿಯಮಗಳು ಹೇಳಲ್ಪಟ್ಟಿರುವ ಕಾರಣ ಪ್ರಯತ್ನಪೂರ್ವಕವಾಗಿ ದಂತಧಾವನ ಮಾಡಿಯೇ ಇತರ ಕೆಲಸಗಳನ್ನು ಮಾಡಬೇಕು : ಅನ್ಯಥಾ ಪರಿಶುದ್ಧನಾಗಲಾರನು.

SHAKTI
SUDHA

A Superb Tonic

Protect the Cow



ಗೋರಕ್ಷಣೆ ಮತ್ತು ಪಾಲನೆದಯಾ ಕಾರ್ಯಗಳು ಹೆಚ್ಚಾಗಿ ನಡೆಯುವಿ

ವುಡ್‌ಲಾಂಡ್ಸ್ ಜನಭರಿತ 2ನೇ ವಾರ

ವೈಭವ ಆರಂಭ

— ಮನಮೋಹಕ ಹಿಂದಿ ಚಿತ್ರ —

ನೀಲ್ ಕಮಲ್ ★ Neel Kamal

ಈಸ್ಟ್‌ಮನ್ ಕಲರ್

.... ಮಿಲಿಯಗಟ್ಟಲೆ ರೂಪಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್

ಬಾಳ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಿಶಿಕಲಾ, ಮಹಮೂದ್

ಆಪೆರ— ಜನಪ್ರಿಯ 4 ನೇ ವಾರ

ಚಿತ್ತಾಕರ್ಷ ಹಿಂದಿ ಚಿತ್ರ

ಬ ಹ ಚಾ ರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕ ಈಸ್ಟ್‌ಮೆ ಕಲರ್‌ನ ಹಿಂದಿ ಚಿತ್ರ

ಶಮ್ಮಿ ಕಪೂರ್, ರಾಜಶ್ರೀ, ಮನ್ಮೋಜ್, ಪ್ರಾಣ್, ಮಹಮೂದ್

Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳೂಸನ್ನಿಲ್ಲಿ ದೊರೆಯುತ್ತವೆ

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Cow Slaughter should be banned Immediately

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4